**( ಇಂದು ದಿಃ 11/02/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,</u>**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 6 ವರ್ಷಗಳಿಂದ ಬಳಕೂರು ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮ ಸಂಸ್ಥೆಯ ಮುಖ್ಯ ಕಚೇರಿ ಕಾರವಾರದಲ್ಲಿ ಇದೆ. ಠರಾವಿನಲ್ಲಿ ಯಾರೆಲ್ಲಾ ನ್ಯಾಯಲಯಕ್ಕೆ ಹಾಜರಾಗಬಹುದು ಎಂದು ನಮೂದು ಮಾಡುತ್ತಾರೆ. ಠರಾವಿನಲ್ಲಿ ನನ್ನ ಹೆಸರು ಇದೆ ಅಥವಾ ಇಲ್ಲ ಎಂದು ನಾನು ನೋಡಿಲ್ಲ. ಠರಾವು ಆದಾಗ ಹೆಸರು ಬದಲಾಗುತ್ತದೆ ಎಂದರೆ ಸರಿ. ನಿಪಿ– 10 ರಲ್ಲಿ ಎಮ್ ಡಿ ಯವರ ಸಹಿ ಇದೆ ಅವರಿಗೆ ಡೈರೆಕ್ಟರ್ ಅಧಿಕಾರ ನೀಡಿರುತ್ತಾರೆ. ಎಮ್ ಡಿ ಅವರಿಗೆ ಸಹಿ ಮಾಡಲು ಅಧಿಕಾರ ನೀಡಿದ ಬಗ್ಗೆ ನಾವು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಸಮಕ್ಷಮ ಅರೋಪಿಗೆ ರೂ. 50,000



ಸಾಲ ನೀಡಿದ್ದಾರೆ. ಆರೋಲೀಪಿಯ ವಾರ್ಷಿಕ ಅದಾಯ 3,00,000 ಎಂದು ಸಾಲದ ಅರ್ಜಿಯಲ್ಲಿ ತೋರಿಸಿರುತ್ತಾರೆ. ಖರ್ಚು 1,20,000 ತೋರಿಸಿರುತ್ತಾರೆ. ಉಳಿತಾಯ ರೂ. 1,80,000 ಆಗುತ್ತದೆ. ರೂ. 1,80,000 ಉಳಿತಾಯ ಆಗುತ್ತಿದ್ದ ಕಾರಣ ಆರೋಪಿಗೆ ರೂ. 50,000 ಸಾಲದ ಅವಶ್ಯಕತೆ ಇರಲಿಲ್ಲ ಎಂದರ ಸರಿಯಲ್ಲ. ಆರೋಪಿಗೆ ವ್ಯಾಪಾರದ ಸಾಲ ನೀಡಿರುತ್ತೇವೆ. ಆರೋಪಿಯು ಈ ಹಿಂದೆ ನಮ್ಮ ಬ್ಯಾಂಕಿನಲ್ಲಿ ರೂ. 50,000 ಸಾಲ ಪಡೆದು ಸಂಪೂರ್ಣವಾಗಿ ಚುಕ್ತಾ ಮಾಡಿದ್ದಾರೆ. ಶೇಕಡಾ 10 ರಷ್ಟು ಎಪ ಡಿ ಹಾಗೂ ಶೆಕಡಾ 5 ರಷ್ಟು ಶೇರಿನ ಮೊತ್ತ ನಾವೇ ಇಟ್ಟು ಕೊಂಡಿರುತ್ತೇವೆ. ಆರೊಪಿ ನಿಗಧಿತ ಅವಧಿಯಲ್ಲಿ ಸಾಲ ಚುಕ್ತಾ ಮಾಡಿದ್ದಾರೆ. ಎಪ್ ಡಿ ಮತ್ತು ಶೇರಿನ ಮೊತ್ತವನ್ನು ಸಾಲದ ಖಾತೆಗೆ ಜಮೆ ಮಾಡಿರುತ್ತೇವೆ. ನಿಪಿ– 8 ರಲ್ಲಿ ಸಾಲ ಕಟ್ಟು ಬಾಕಿ ಆದ ಮೊತ್ತ ಕಾಣೆಸುವುದಿಲ್ಲ. ಸಾಲದ ಲೆಡ್ಜರ್‌ನಲ್ಲಿ ಆರೊಪಿಯಿಂದ ಯಾವ ದಿನಾಂಕಕ್ಕೆ ಎಷ್ಟು ಪೊತ್ತ ಬಾಕಿ ಇದೆ ಎಂದು ಕಾಣುತ್ತದೆ. ಸಾಲದ ಖಾತೆಯಲ್ಲಿ ದಿಃ 16.09.2022 ರಂದು ಆರೋಪಿಯಿಂ ದ ರೂ. 75,000 ಬಾಕಿ ಇದೆ ಎಂದು ಕಾಣುವುದಿಲ್ಲ. ಚೆಕ್ಕು ನೀಡಿದ ಬಗ್ಗೆ ನಮ್ಮ ಬಳಿ ದಾಖಲೆ ಇರುತ್ತವೆ. ನಿಖರವಾಗಿ ದಿಃ 16.09.2022 ರಂದು ಆರೊಪಿ ಚೆಕ್ಕನ್ನು ನೀಡಿದ್ದಾರೆ ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಚೆಕ್ಷನ್ನು ನೀಡಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿಲ್ಲ. ಚೆಕ್ಕನ್ನು ಆರೋಪಿ ಬರೆದು ತಂದಿದ್ದರು. ರಿಕವರಿಗೆ ಹೋದಾಗ ಸಾಲ ಬಾಕಿ ಇರುವ ಬಗ್ಗೆ

ಆರೋಪಿಯ ಅಮ್ಮನಿಗೆ ತಿಳಿಸಿರುತ್ತೇವೆ. ಆರೊಪಿಯ ಹಿಂದಿನ ಸಾಲದ ಖಾತೆ ತುಂಬಿದಾಗ ಸಾಲದ ಅರ್ಜಿಗೆ ಆರೋಪಿಯ ಸಹಿ ಪಡೆದಿರುತ್ತೇವೆ. ಸಾಲಗಾರದ ಮುಂದೆ ಅರ್ಜಿ ತುಂಬಿ ಸಹಿ ಪಡೆಯುತ್ತೆವೆ. ಅರೋಪಿಯು ನಾವು ಹೇಳಿದ ದಿನಾಂಕಕ್ಕೆ ರೂ. 50,000 ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಹಿಂದೆ ಪಡೆದ ಸಾಲವನ್ನು ಸಂಪೂರ್ಣವಾಗಿ ಚುಕ್ತಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನು ಹಿಂದಿನ ಸಾಲದ ಭದ್ರತೆಗಾಗಿ ನಿಪಿ-1 ಚೆಕ್ಕನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಎಪ ಡಿ ಹಾಗೂ ಶೇರಿನ ಮೊತ್ತವನ್ನು ವಾಪಸ್ತು ಕೇಳಿದಾಗ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಹಣ ಕೊಡಲು ಬಾಧ್ಯಸ್ತನಲ್ಲ ಸದರಿ ದಾಖಲೆಗಳು ಸುಳ್ಳು ದಾಖಲೆಗಳು ಆಗಿವೆ ಎಂದರೆ ಸರಿಯಲ್ಲ. ಆರೋಪಿತ ಹಾಗೂ ನಮ್ಮ ಬ್ಯಾಂಕ್ ಸಹ ಹೊನ್ನಾವರ ತಾಲೂಕಿನ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಹೊನ್ನಾವರ ವ್ಯಾಪ್ತಿಗೆ ಬರುವುದರಿಂದ ಭಟ್ಕಳ ನ್ಯಾಯಾಲಯದ ವ್ಯಾಪ್ತಿಗೆ ಸದರಿ ಪ್ರಕರಣ ಉರ್ಜಿತ ಇಲ್ಲ ಎಂದರೆ



ಭಟ್ಕಳದಲ್ಲಿ ನಮಗೆ ಕರೆಂಟ್ ಅಕೌಂಟ್ ಇದೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ.ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**